ಕರ್ನಾಟಕ ವಿಧಾನ ಪರಿಷತ್

140ನೇ ಅಧಿವೇಶನ -2020

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. | 6(155) |
| ಮಾನ್ಯ ಸದಸ್ಯರ ಹೆಸರು | ಡಾ.ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಉಪಮುಖ್ಯಮಂತ್ರಿಗಳು(ಉನ್ನತ ಶಿಕ್ಷಣ) |
| ಉತ್ತರಿಸಬೇಕಾದ ದಿನಾಂಕ | 02.03.2020 |

| | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ನೀಡಲಾದ ಜಮೀನಿನಲ್ಲಿ ಶೈಕ್ಷಣಿಕ ಹಾಗೂ ಆಡಳಿತ ಕಟ್ಟಡಗಳು ನಿರ್ಮಾಣ ಆಗಿವೆಯೇ; ಆಗದಿದ್ದಲ್ಲಿ ಇದಕ್ಕೆ ಕಾರಣಗಳೇನು; (ವಿವರ ನೀಡುವುದು) | ಆಡಳಿತಾತ್ಮಕ ಕಾರ್ಯನಿರ್ವಹಣೆಯನ್ನು ಸುಲಲಿತಗೊಳಿಸುವ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸುವ ಉದ್ದೇಶದಿಂದ, ಬೆಂಗಳೂರು ವಿಶ್ವವಿದ್ಯಾಲಯವನ್ನು ತ್ರಿಭಜಿಸುವ ಮೂಲ ಹೊಸದಾಗಿ ಆರಂಭಿಸಲಾಗಿರುವ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಜಂಗಮಕೋಟೆ ಹೋಬಳಿಯ ಅಮರಾವತಿ ಗ್ರಾಮದ ಸ.ನಂ.47ರಲ್ಲಿನ 110.25 ಎಕರೆ ಜಮೀನನ್ನು ಖಾಯಂ ಮಂಜೂರು ಮಾಡಲಾಗಿದೆ.<br><br>ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆಸ್ತಿ ಸೃಜನೆಗಾಗಿ 2016ನೇ ಸಾಲಿನಿಂದ 2019 ನೇ ಸಾಲಿನ ಅವಧಿಯಲ್ಲಿ ಒಟ್ಟು ರೂ. 25.46 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, 2019-20ನೇ ಆರ್ಥಿಕ ವರ್ಷದಲ್ಲಿ 1.99 ಕೋಟಿಗಳ ಅವಕಾಶ ಕಲ್ಪಿಸಲಾಗಿದೆ.<br><br>ನೂತನ ಕ್ಯಾಂಪಸ್‌ನಲ್ಲಿ ಮೂಲಸೌಕರ್ಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಮಗ್ರ ಯೋಜನಾ ವರದಿ ಹಾಗೂ ಅಂದಾಜುಗಳನ್ನು ತಯಾರಿಸಲು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಿಂದ ಕ್ರಮವಹಿಸಲಾಗುತ್ತಿದೆ.<br>ಮೂಲಸೌಕರ್ಯಗಳನ್ನು ಕಲ್ಪಿಸುವ ಸಂಬಂಧದಲ್ಲಿ ಹಣಕಾಸಿನ ಕೊರತೆ ಎದುರಾಗದಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆರಂಭಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಪರ್ಯಾಪ್ತ ಆರ್ಥಿಕಾನುದಾನವನ್ನು ಮಂಜೂರು ಮಾಡಲು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

-2

| | | |
|---|---|---|
| ಇ | ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಪೀಠೋಪಕರಣಕ್ಕೆ ಯಾವ ಯಾವ ವಿಭಾಗಕ್ಕೆ ಎಷ್ಟು ಹಣ ವಿನಿಯೋಗಿಸಲಾಗಿದೆ: (ವಿಭಾಗವಾರು ವಿವರ ನೀಡುವುದು) | ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗಾಗಿ 2018-19 ಹಾಗೂ 2019-20ನೇ ಸಾಲಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳನ್ವಯ ಟೆಂಡರ್ ಪ್ರಕ್ರಿಯೆಯನ್ನು ಜರುಗಿಸಿ ಕನಿಷ್ಠ ಅವಶ್ಯಕತೆಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರದ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಮಂಡಳಿಯಿಂದ ಪೀಠೋಪಕರಣಗಳನ್ನು ಖರೀದಿಸಲಾಗಿದೆ. ಪೀಠೋಪಕರಣಗಳನ್ನು ಖರೀದಿಸಲು ವ್ಯಯಿಸಲಾಗಿರುವ ವೆಚ್ಚದ ಕಛೇರಿ/ವಿಭಾಗವಾರು ವಿವರಗಳನ್ನು ಈ ಕೆಳಕಂಡಂತೆ ದೃಢೀಕರಿಸಲಾಗಿದೆ |

| ಕ್ರ. ಸಂ | ವಿಭಾಗ/ಕಛೇರಿ | ವೆಚ್ಚ(ರೂ.ಗಳಲ್ಲಿ) |
|---|---|---|
| 1 | ಕುಲಪತಿಗಳ ಕಛೇರಿ, ಕೋಲಾರ | 5,75,400/- |
| 2 | ಕುಲಸಚಿವರ ಕಛೇರಿ, ಕೋಲಾರ | 5,35,600/- |
| 3 | ಕುಲಸಚಿವರು(ಮೌ) ಕಛೇರಿ, ಕೋಲಾರ | 4,84,500/- |
| 4 | ವಿತ್ತಾಧಿಕಾರಿಗಳ ಕಛೇರಿ, ಕೋಲಾರ | 4,25,400/- |
| 5 | ಶೈಕ್ಷಣಿಕ ವಿಭಾಗ, ಕೋಲಾರ | 12,97,134/- |
| 6 | ಭೌತಶಾಸ್ತ್ರ ಸ್ನಾತಕೋತ್ತರ ವಿಭಾಗ, ಕೋಲಾರ | 28,52,500/- |
| 7 | ಬೋಧಕರ ಕೊಠಡಿಗಳು ಮತ್ತು ತರಗತಿಗಳು, ಕೋಲಾರ | 38,15,767/- |
| 8 | ಸ್ನಾತಕೋತ್ತರ ಕೇಂದ್ರ ಮಂಗಸಂದ್ರ<br>ಅ) ಗ್ರಂಥಾಲಯ-----------<br>ಬ)ಸಸ್ಯಶಾಸ್ತ್ರ ವಿಭಾಗ-------- | <br>37,15,219/-<br>28,52,500/- |
| 9 | ವಿಶ್ವವಿದ್ಯಾಲಯ ಶಿಕ್ಷಣ ಕಾಲೇಜು, ಚಿಕ್ಕಬಳ್ಳಾಪುರ (ತರಗತಿಗಳು ಮತ್ತು ಗ್ರಂಥಾಲಯ) | 10,29,250/- |
| 10 | ಪ್ರಯೋಗಶಾಲೆ<br>ಅ) ಸಸ್ಯಶಾಸ್ತ್ರ(ಮಂಗಸಂದ್ರ)----<br>ಬ) ಭೌತಶಾಸ್ತ್ರ(ಕೋಲಾರ)----- | <br>3,20,623/-<br>2,52,573/- |
| | ಒಟ್ಟು | 1,81,56,456/- |

| | | |
|---|---|---|
| ಇ | ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಪರೀಕ್ಷಾ ನಿರ್ವಹಣೆಗೆ ತಂತ್ರಾಂಶವನ್ನು ಬಳಸಲಾಗುತ್ತಿದೆಯೇ; ಇದನ್ನು ಯಾವ ರೀತಿ ಪಡೆಯಲಾಗಿದೆ ಹಾಗೂ ತಂತ್ರಾಂಶವನ್ನು ಎಷ್ಟು ಅವಧಿಗೆ ಪಡೆಯಲಾಗಿದೆ; ಈ ತಂತ್ರಾಂಶಕ್ಕೆ ಎಷ್ಟು ವೆಚ್ಚವನ್ನು ವಿಶ್ವವಿದ್ಯಾಲಯವು ನೇರವಾಗಿ ಅಥವಾ ಪರೋಕ್ಷವಾಗಿ ಭರಿಸಬೇಕಾಗುತ್ತದೆ? (ವಿವರ ನೀಡುವುದು) | ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ನೂತನ ವಿಶ್ವವಿದ್ಯಾಲಯವಾಗಿರುವ ಹಾಗೂ ಅಲ್ಲಿ ಶಾಶ್ವತ, ಅನುಭವಿ/ ಪರಿಣಿತ ಸಿಬ್ಬಂದಿ ಇರದ ಹಿನ್ನೆಲೆಯಲ್ಲಿ ಇತರ ವಿಶ್ವವಿದ್ಯಾಲಯಗಳು ಅಳವಡಿಸಿಕೊಂಡಿರುವ ಸಂಗ್ರಹಣ ಪ್ರಮುಖವಿಧಾನವನ್ನು ಅನುಸರಿಸಿ ಪರೀಕ್ಷಾ ಕಾರ್ಯದ ನಿರ್ವಹಣೆ ತಂತ್ರಾಂಶಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರಚಿಸಲಾದ ನಿಯಮಗಳನ್ವಯ ಇ-ಟೆಂಡರ್ ಮೂಲಕ 5 ವರ್ಷಗಳ ಸೀಮಿತ ಅವಧಿಗೆ ಪಡೆಯಲಾಗುತ್ತಿದ್ದು, ಈ ತಂತ್ರಾಂಶ ಸಂಗ್ರಹಣೆಗಳಿಗೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ರೂ 45, 75, 979 ಗಳನ್ನು ಭರಿಸಬೇಕಾಗುತ್ತದೆ. |

ಇಡಿ/40/ಯುಬಿವಿ/2020

(ಡಾ॥ ಅಶ್ವತ್ಥ ನಾರಾಯಣ ಸಿ.ಎನ್)

ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)